

ಛಾಯಾಗ್ರಾಹಕರು ಮಕ್ಕಳ ಫೋಟೋ ಕ್ಲಿಕ್ಕಿಸುವಾಗ ಹಲವಾರು ಭಾವನೆಗಳು ಮನದಲ್ಲಿ ಮೂಡುತ್ತವೆ. ಮಕ್ಕಳ ಮುಗ್ಧತೆ, ನಿಷ್ಕಲ್ಮಶ ನಗು, ಉತ್ಸಾಹ, ಚೈತನ್ಯ, ಸಂತಸ ಮೊದಲಾದ ಭಾವನೆಗಳನ್ನು ಕ್ಯಾಮೆರಾ ಕಣ್ಣಿನಲ್ಲಿ ನೋಡುತ್ತಾ ನಮ್ಮ ಮನಸ್ಸಿನ ಬ್ಯಾಟರಿ ರೀಚಾರ್ಜ್ ಆಗುತ್ತದೆ. ನಮ್ಮಲ್ಲೂ ಮಕ್ಕಳ ಮುಗ್ಧತೆ ಮನೆಮಾಡುತ್ತದೆ.

ಮಕ್ಕಳು ಎಂದೊಡನೆ ನನಗೆ ಥಟ್ಟನೆ ನೆನಪಾಗುವುದು ಭೂತಾನ್. ಸ್ವರ್ಗದಂತಹ ಆ ದೇಶದಲ್ಲಿನ ಮಕ್ಕಳನ್ನು 'ಸ್ವರ್ಗದ ಮಕ್ಕಳು' (ಚಿಲ್ಡ್ರನ್ ಆಫ್ ಹೆವನ್) ಅನ್ನಬಹುದೇನೋ. ನನ್ನ ಭೂತಾನ್ ಪ್ರವಾಸದ ನೆನಪುಗಳಲ್ಲಿ ಮಕ್ಕಳಿಗೆ ವಿಶೇಷವಾದ ಸ್ಥಾನವಿದೆ.

## ಮುಗ್ಧತೆಯೇ ಮಕ್ಕಳಾಗಿ...

ಭೂತಾನ್ ದೇಶದ ರಾಜಧಾನಿ ಥಿಂಪು ನಗರದಲ್ಲಿ ಟಿಬೇಟಿಯನ್ ಶೈಲಿಯಲ್ಲಿ ನಿರ್ಮಿಸಿರುವ 'ನ್ಯಾಷನಲ್ ಮೆಮೊರಿಯಲ್ ಚೋರ್ಟೆನ್' ಎಂಬ ಪ್ರಾರ್ಥನಾ ಸ್ಥಳವಿದೆ. ಬಿಳಿಯ ಬಣ್ಣದ ಸ್ತೂಪದ ಸುತ್ತಲೂ ಸಾಂಪ್ರದಾಯಿಕ ರೀತಿಯ ಕಂಬಗಳು, ಬಾಗಿಲುಗಳು, ಚಿತ್ತಾರಗಳು, ಬಂಗಾರದ ಬಣ್ಣದ ಕಳಶ, ಸುತ್ತಲಿನ ಹುಲ್ಲುಗಾವಲು, ಇವೆಲ್ಲವೂ ಸೇರಿ ಆ ಪ್ರಾರ್ಥನಾ ಸ್ಥಳ ಅತ್ಯಂತ ಆಕರ್ಷಕವಾಗಿವೆ. ನಾವು ಹೋದಾಗ ಪೇಂಟಿಂಗ್ ಕೆಲಸ ನಡೆಯುತ್ತಿದ್ದುದರಿಂದ, ಸ್ತೂಪದ ಒಳಗೆ ಪ್ರವೇಶಿಸಲು ಆಗಲಿಲ್ಲ. ಅದರ ಸುತ್ತಲೂ ಪ್ರದಕ್ಷಿಣೆ ಹಾಕಿದೆವು. ಅಲ್ಲೊಂದು ಮಂಟಪದ ಮೇಲೆ ಕುಳಿತಿದ್ದ ಮುದ್ದಾದ ಎರಡು ಮಕ್ಕಳನ್ನು ಕಂಡು ಫೋಟೋ ತೆಗೆದೆ. ಭೂತಾನ್‌ನ ಸಾಂಪ್ರದಾಯಿಕ ಉಡುಗೆ 'ಘೋ' ಧರಿಸಿದ್ದ ಆ ಪುಟ್ಟ ಸಹೋದರರು ತಮ್ಮ ತಾಯಿಯೊಂದಿಗೆ ಬಂದಿದ್ದು, ಸ್ತೂಪದ




